


# ಬೀಡಿಂಗ್ ಫುಟ್

ಈ ಟ್ಯುಟೋರಿಯಲ್ನಲ್ಲಿ, ಉಷಾ ಜಾನೋಮ್ ಬೀಡಿಂಗ್ ಫುಟ್ ಬಳಸಿಕೊಂಡು ಮಣಿಗಳ ಮಾಲೆಯಿಂದ ಹೇಗೆ ಅಲಂಕಾರ ಮಾಡುವುದೆಂದು ನೀವು ಕಲಿಯಲಿದ್ದೀರಿ.




ಎಷ್ಟು ಸಾಮಾನ್ಯವಾಗಿ ನೀವು ಉಡುಪುಗಳು ಮತ್ತು ಆ್ಯಕ್ಸೆಸರೀಸ್ಗಳು ಮಣಿಗಳಿಂದ ಅಲಂಕೃತಗೊಂಡಿರುವುದನ್ನು ನೋಡಿದ್ದೀರಿ ಮತ್ತು ನೀವೂ ಹಾಗೇ ಮಾಡಬೇಕೆಂದು ಬಯಸಿದ್ದೀರಿ, ಆದರೆ ಒಮ್ಮೆಗೆ ಒಂದು ಮಣಿಯನ್ನು ಜೋಡಿಸುವ ನೋವಿಲ್ಲದೆ? ಇಲ್ಲಿದೆ ಒಂದು ಉತ್ತರ.
ಈ ಟ್ಯುಟೋರಿಯಲ್ನಲ್ಲಿ ನೀವು ನಿರ್ಧಿಷ್ಟವಾಗಿ ಅದನ್ನೇ ಮಾಡಲು ಕಲಿಯುತ್ತೀರಿ- ಉಷಾ ಜಾನೊಮ್ ಬೀಡಿಂಗ್ ಫುಟ್ ಬಳಸಿಕೊಂಡು ಮಣಿಯ ಹಾರದಿಂದ ಅಲಂಕರಿಸುವುದು.

ಉಷಾ ಜಾನೊಮ್ ಬೀಡಿಂಗ್ ಫುಟ್ ಎಲ್ಲಾ ರೀತಿಯ ಎಲ್ಲಾ ರೀತಿಯ ಮಣಿಗಳ- ಮರದ, ಗಾಜಿನ, ಮುತ್ತುಗಳ ಮೇಲೆ ಹೊಲಿಯಲು ಸಹಾಯ ಮಾಡುತ್ತದೆ. ಆದರೆ ಮಣಿಯ ಗಾತ್ರ 2.5 ಮಿ.ಮೀ ಮತ್ತು 4.0 ಮಿ.ಮೀ ಮಧ್ಯದಲ್ಲಿರಬೇಕು. ಅದು ಅಷ್ಟು ಸುಲಭವಾಗಿರಲು ಹೇಗೆ ಸಾಧ್ಯ ಎಂಬುದನ್ನು ಅನ್ವೇಷಿಸುವ ಕುತೂಹಲ...ಆರಂಭಿಸೋಣ.

ಈ ಅಭ್ಯಾಸಕ್ಕೆ ನಿಮಗೆ ಬೇಕಾಗಿರುವುದು ಉಷಾ ಜಾನೊಮ್ ಬೀಡಿಂಗ್ ಫುಟ್, ಬೀಡಿಂಗ್ನ ಅಭ್ಯಾಸ ಮಾಡಲು ಒಂದು ತುಂಡು ಬಟ್ಟೆ, ಬೀಡಿಂಗ್ ಲೇಸ್, ಹಗ್ಗ (ಮಣಿಗಳ ಡಯಾಮೀಟರ್ 2.5 ರಿಂದ 4 ಮಿ.ಮೀ ಇರುವಂತೆ), ಪಾರದರ್ಶಕ ದಾರ ಮತ್ತು ಒಂದು ಜೊತೆ ಕತ್ತರಿ.

ಬೀಡ್ ಲೇಸ್ ಸ್ಟ್ರಿಪ್ನ್ನು ಬಟ್ಟೆಯ ತುಂಡಿನುದ್ದಕ್ಕೂ ಇಡಿ, ಮತ್ತು ಅಳೆಯಲು ಕತ್ತರಿಸಿ. ಎರಡು ಅಟ್ಯಾಚ್ಮೆಂಟ್ಗಳಿರುವ ಬೀಡಿಂಗ್ ಫುಟ್ನ್ನು ಬಳಸಿ.



ಸಾಮಾನ್ಯ ಪ್ರೆಸ್ಸರ್ ಫುಟ್ ಬದಲಿಗೆ ಬೀಡಿಂಗ್ ಫುಟ್ಗೆ ಕ್ಷಣಾರ್ಧದಲ್ಲಿ ಬದಲಿಸಿಕೊಳ್ಳಿ
ಬೀಡ್ಸ್ ಳ ಲೈನ್ಗಳನ್ನು ಬೀಡಿಂಗ್ ಫುಟ್ನ ಚಡಿಗಳಡಿಯಲ್ಲಿ ಈ ರೀತಿ ಇಡಿ.
ಜಿಗ್ಜಾಗ್ ಹೊಲಿಗೆಯನ್ನು ಆರಿಸಿಕೊಳ್ಳಿ, ಹೊಲಿಗೆಯ ಅಗಲವನ್ನು 4 ಕ್ಕೆ ಹೊಂದಿಸಿ, ಮತ್ತು ಹೊಲಿಗೆಯ ಉದ್ದವನ್ನು 2.5 ರಲ್ಲಿಡಿ.

ಸ್ಟಾರ್ಟ್ ಒತ್ತಿ, ವೇಗ ನಿಧಾನವಾಗಿರಲಿ, ಮತ್ತು ಬೀಡ್ಸ್ನ ನೇರ ಲೈನ್ನುದ್ದಕ್ಕೂ ಹೊಲಿಯಲು ಆರಂಭಿಸಿ.
ಮಣಿಗಳನ್ನು ಬಟ್ಟೆಯಲ್ಲಿ ಮುಚ್ಚಲು ಸೂಜಿ ಹೇಗೆ ಕ್ರಿಸ್ಕ್ರಾಸ್ ಫ್ಯಾಶನ್ನಲ್ಲಿ ಹೋಗುತ್ತದೆ ಎಂಬುದನ್ನು ನೀವು ನೋಡುತ್ತೀರಿ.
ಒಮ್ಮೆ ನೀವು ತುದಿಗೆ ತಲುಪಿದರೆ, ನೂಲನ್ನು ಕತ್ತರಿಸಿ ಮತ್ತು ಬೀಡಿಂಗ್ ಮಾದರಿಯ ನಿಮ್ಮ ಮೊದಲ ಯತ್ನದ ಪರಿಣಾಮವೇನು ಎಂಬುದನ್ನು ಪರಿಶೀಲಿಸಿ- ನಿಮಗೆ ಸಂತಸವಾಗಲಿಲ್ಲವೇ! ಈಗ ನೀವು ಮಣಿಗಳನ್ನು ಜೋಡಿಸಬೇಕೆಂದು ಬಯಸಿದ್ದ ಎಲ್ಲಾ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಕಾತರರಾಗಿದ್ದೀರಿ ಎಂದು ನನಗೆ ಖಾತ್ರಿಯಿದೆ. ಈ ಮಣಿಗಳಿಂದ ಮಾಡಿದ ಈ ನೆಕ್ಲೇಸ್ನ್ನು ನೋಡಿ- ಅದ್ಭುತವಾಗಿಲ್ಲವೇ ಇದು !

ನೀವು ಹೆಚ್ಚಿನ ವಿನ್ಯಾಸದ ಅಂಶಕ್ಕಾಗಿ ನೂಲಿನ ಬದಲಿಗೆ ದಾರದವನ್ನೂ ಬಳಸಬಹುದು. ಒಮ್ಮೆ ನೀವು ವಿವಿಧ ರೀತಿಯ ದಾರಗಳು ಮತ್ತು ಮಣಿಗಳ ಮಾರುಕಟ್ಟೆಗೆ ತೆರೆದುಕೊಂಡರೆ, ಆಗ ನಮಗೆ ಈ ಫುಟ್ನಿಂದ ಏನೆಲ್ಲಾ ಮಾಡಬಹುದು ಎಂಬುದರ ಅರಿವಾಗುತ್ತದೆ. ನೀವು ಈ ಫುಟ್ ಅಟ್ಯಾಚ್ಮೆಂಟನ್ನು ಮಣಿ, ದಾರಗಳನ್ನೂ ಬಟ್ಟೆಗೆ ಅಥವಾ ಪೇಪರ್, ಪ್ಲಾಸ್ಟಿಕ್ ಮತ್ತು ಸೆಣಬಿನಂತಹ ನಿಮ್ಮ ಆಯ್ಕೆಯ ಇತರ ಯಾವುದೇ ವಸ್ತುವಿಗೆ ಹೊಲಿಯಲು ಬಳಸಿಕೊಳ್ಳಬಹುದು.